**D.W-1**

**ದಿನಾಂಕ 21-12-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಎಸ್ ವಿ ಪಿ ವಕೀಲರಿಂದಃ**

1. ನನ್ನ ಮತ್ತು ಪಿರ್ಯಾದಿಯ ಮಧ್ಯ ದಿಃ 26-11-2021 ರಾಜಿಯಾಗಿದೆ. ಆ ಬಗ್ಗೆ ಕರಾರು ಪತ್ರ ಆಗಿದೆ. ಈಗ ನನಗೆ ತೋರಿಸಲಾದ ದಾಖಲೆಯೇ ಕರಾರು ಪತ್ರ ಆಗಿರುತ್ತದೆ. ಸದರಿ ದೃಡೀಕೃತ ಕರಾರುಪತ್ರದ ನಕಲು ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ-1 ಎಂದು ಗುರುತಿಸಲಾಗಿದೆ. ಕರಾರು ಪತ್ರದಲ್ಲಿ ನಾನು ಸಹಿ ಮಾಡಿರುವ ಚೆಕ್ಕಗಳನ್ನು ಪಿರ್ಯಾದುದಾರ ಮರಳಿ ಕೊಡಬೇಕೆಂದು ಕರಾರಿನಲ್ಲಿ ಬರೆದಿಲ್ಲ. ನನ್ನ ಮತ್ತು ಪಿರ್ಯಾದಿಯ ಮಧ್ಯ ಔಷಧಿಯ ಲಾಬಾಂಶದಲ್ಲಿ 60 ಪ್ರತಿಶತ ಕೊಡಬೇಕು ಎಂದು ನಿಡಿ-1 ರಲ್ಲಾಗಲಿ ಅಥವಾ ಬೇರೆ ಯಾವುದೇ ಕರಾರು ಪತ್ರದಲ್ಲಿ ನಾನು ಯಾವುದೇ ಶಪತ ತೋರಿಸಿಲ್ಲ.

2. ಸಿ ಸಿ 1172/2022 ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇದೆ ಎಂದರೆ ನಿಜ. ಆ ಪ್ರಕರಣದಲ್ಲಿ ನಾನು ಈಗಾಗಲೇ ಸಾಕ್ಷ ನುಡಿದಿರುತ್ತೇನೆ ಎಂದರೆ ನಿಜ. ಆ ನನ್ನ ಸಾಕ್ಷದಲ್ಲಿ ಆರೋಪಿ ಹತ್ತಿರ ನನ್ನ ಸಹಿ ಮಾಡಿರುವ ಚೆಕ್ಕುಗಳು ಇವೆ ಎಂದು ಹೇಳಿರುತ್ತೇನೆ. ನಾನು ಸಹಿ ಮಾಡಿದ ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿ ಪಿರ್ಯಾದಿ ಸಲ್ಲಿಸಿರುತ್ತಾನೆ ಎಂದು ನುಡಿದಿರುತ್ತೇನೆ. ಈಗ ನನಗೆ ತೋರಿಸಲಾದ ಸಾಕ್ಷಿಯ ಪ್ರಮಾಣ ಪತ್ರ ಮತ್ತು ಸಾಕ್ಷದ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಅಭಿಮುಖವಾಗಿ ನಿಪಿ-6 ಎಂದು ಗುರುತಿಸಲಾಯ್ತು.

3. ಈಗ ನನಗೆ ತೋರಿಸಲಾದ ಚೆಕ್ಕು ಅದು ನಾನು ಪಿರ್ಯಾದಿಗೆ ಸಹಿ ಮಾಡಿ ಕೊಟ್ಟ ಚೆಕ್ಕ ಇರುತ್ತದೆ ಎಂದರೆ ನಿಜ. ನಿಪಿ-1 ರಲ್ಲಿ ಇರುವ ನಿಪಿ-1 ಎ ಸಹಿ ನನ್ನದೇ. ನಾನು ಪಿರ್ಯಾದಿಗೆ ಚೆಕ್ಕಗಳನ್ನು ಮರಳಿ ಕೊಡಲು ನೋಟಿಸು ಕೊಟ್ಟಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 12 ರಲ್ಲಿ ನನಗೆ ಪಿರ್ಯಾದಿದಾರ ಚೆಕ್ಕ ನಂ. 0922208 ಮತ್ತು 0922209 ನೇದ್ದನು ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ 2 ಚೆಕ್ಕುಗಳ ಬಗ್ಗೆ ನಿಡಿ-1 ರಲ್ಲಿ ನಮೂದಿಸಿಲ್ಲಎಂದರೆ ಸರಿಯಲ್ಲ.

4. ದಿಃ 26-11-2021 ರಂತೆ ಕೊಡಬೇಕಾದ ಹಣವನ್ನು ಪಿರ್ಯಾದಿದಾರರು ನನಗೆ ಕೊಟ್ಟು ಔಷಧಿ ಅಂಗಡಿಯ ಸ್ವಾದೀನತೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರಂತೆ ವ್ಯವಹಾರ ಮುಗಿದ ನಂತರ ನನ್ನ ಅಡಚಣೆಗಾಗಿ ಪಿರ್ಯಾದಿ ಕಡೆಯಿಂದ 9 ಲಕ್ಷ 30 ಸಾವಿರ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಿಪಿ-1 ಚೆಕ್ಕನ್ನು ನಾನು ಪಿರ್ಯಾದಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಇದೇ ರೀತಿ ಹಲವಾರು ಜನರಿಂದ ಹಣ ಪಡೆದು ಚೆಕ್ಕು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೇಲೆ 5 ರಿಂದ 6 ಪ್ರಕರಣಗಳು ದಾಖಲಾಗಿವೆ ಇವೆ ಎಂದರೆ 3 ಪ್ರಕರಣಗಳು ದಾಖಲೆ ಇವೆ ಎಂದು ಹೇಳುತ್ತಾರೆ. ಸವಣೂರು ನ್ಯಾಯಾಲಯದಲ್ಲಿ ನನ್ನ ವಿರುದ್ಧ ಒಂದು ಚೆಕ್ಕು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸವಣೂರು ನ್ಯಾಯಾಲಯದಲ್ಲಿ ನಾನು ಆ ಚೆಕ್ಕಿನ ಕೇಸ್ ನಲ್ಲಿ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ಈಗ ನನಗೆ ತೋರಿಸಲಾದ ದಾಖಲೆ ಪ್ರಕಾರ ನನ್ನ ವಿರುದ್ಧ ಶಿವಾಜಿ ರಾವ್ ಘಾಟಗೆ ಅಂಬುವವರು ಸಿ ಸಿ 208/2016 ನೇದ್ದನ್ನು ದಾಖಲಿಸಿದ್ದು ಅದರಲ್ಲಿ ನಾನು ರಾಜೀ

ಮಾಡಿಕೊಂಡಿರುತ್ತೇನೆ ಎಂದರೆ ನಿಜ. ಸಾಕ್ಷಿ ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಮತ್ತು ಪಿರ್ಯಾದಿಯ ದೃಡೀಕೃತ ನಕಲು ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯ್ತು. ನಾನು ಈ ರೀತಿಯಾಗಿ ಸಾಲ ಪಡೆದು ನಂತರ ಚೆಕ್ಕು ಕೊಟ್ಟು ನಾನು ಸಾಲ ಪಡೆದೇ ಇಲ್ಲ ಎಂದು ಹೇಳುವ ಹವ್ಯಾಸ ನನಗೆ ಇದೆ ಎಂದರೆ ಸರಿಯಲ್ಲ.

6. ಸದರಿ ಪ್ರಕರಣದಲ್ಲಿ ಚೆಕ್ಕು ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿದೆ ಎಂದರೆ ನಿಜ. ನಿಪಿ-3 ರಂತೆ ಬೇಡಿಕೆ ನೋಟಸ್ಸು ಪಿರ್ಯಾದುದಾರ ನನಗೆ ಕೊಟ್ಟಿದ್ದ ಎಂದರೆ ನಿಜ. ನಿಪಿ-3 ಜಾರಿಯಾದ ನಂತರ ನೋಟಿಸ್ಸಿಗೆ ಪ್ರತ್ಯುತ್ತರ ಕೊಟ್ಟಿರುತ್ತೇನೆ ಎಂದರೆ ನಿಜ. ಈಗ ನನಗೆ ತೋರಿಸಲಾದಂತೆ ನಾನು ಕೊಟ್ಟ ನೋಟಿಸ್ಸಿನ ಪ್ರತ್ಯುತರ ಇರುತ್ತದೆ ಎಂದರೆ ನಿಜ. ಅದನ್ನು ನೋಡಿ ಗುರುತಿಸಿದ್ದರಿಂದ ನಿಪಿ-9 ಎಂದು ಗುರುತಿಸಲಾಯ್ತು.

7. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದಂತೆ ನನ್ನ ವಕೀಲರು ತಯಾರಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಸಹಿ ಮಾಡಿಕೊಟ್ಟ ಚೆಕ್ಕು ನಿಪಿ-1 ನ್ನು ಪಿರ್ಯಾದು ದಾರ ದುರುಪಯೋಗ ಪಡಿಸಿಕೊಂಡಿಲ್ಲ ಎಂದು ಅದರಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ 9 ಲಕ್ಷ 30 ಸಾವಿರ ಹಣ ಕೊಡಲು ಬಾದ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಖಾತೆಯಲ್ಲಿ ಸಾಕಷ್ಟು ಇಲ್ಲದ ಕಾರಣ ಉದ್ದೇಶಪೂರ್ವಕವಾಗಿ ಚೆಕ್ಕು ಅಮಾನ್ಯಗೊಳ್ಳಲು ನಾನು ಕಾರಣಿಬೂತನಾದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಾರರನ ವಿರುದ್ದ ಸುಳ್ಳು ಪ್ರಕರಣ

ಹಾಕಿರುತ್ತಾನೆ ಎಂದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ತಪ್ಪಿಸಿಕೊಳ್ಳಲು ಸುಳ್ಳು ಪ್ರಕರಣವನ್ನು ನಮೂದಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**